**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.**

**ಎಸ್.ಸಿ. ಕೇಸ್ ನಂ.49/2024**

ಪ್ರಾ.ಸಾ. 15

ಚಾ.ಸಾ. 15

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಿದ ದಿನಾಂಕ 24.12.2025**

| | |
|---|---|
| ಸಾಕ್ಷಿದಾರರ ಹೆಸರು | ಡಾ.ಸ್ಮಿತಾ.ಜಿ. |
| ಗಂಡನ ಹೆಸರು | ಶಿವಮೂರ್ತಿ.ಎಸ್. |
| ವಯಸ್ಸು | 48 ವರ್ಷ |
| ಉದ್ಯೋಗ | ಸಹಾಯಕ ನಿರ್ದೇಶಕರು, ಆರ್ ಎಫ್ ಎಸ್ ಎಲ್ ಬಳ್ಳಾರಿ |
| ವಾಸ | ಬಳ್ಳಾರಿ |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

.1. ನಾನು 2014 ರಿಂದ 2023 ರವರೆಗೆ ನಾನು ಆರ್ ಎಫ್ ಎಸ್ ಎಲ್ ಮೈಸೂರು ಇಲ್ಲಿ ಜೀವಶಾಸ್ತ್ರ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

.

.2. ದಿನಾಂಕ 21.03.2023 ರಂದು ಕೆಸ್ತೂರು ಪೊಲೀಸ್ ಠಾಣೆಯ ಮೊಕದ್ದಮೆ ಸಂಖ್ಯೆ 30/2023 ರಲ್ಲಿ ಮೂರು ಸೀಲಾದ ವಸ್ತುಗಳನ್ನು ಪೊಲೀಸ್ ಪೇದೆ ಖಾಸಿಂ ಸಾಬ್ ರವರು ನಮ್ಮ ಕಛೇರಿಯ ಸ್ವೀಕೃತಿ ವಿಭಾಗದಲ್ಲಿ ಸಲ್ಲಿಸಿರುತ್ತಾರೆ. ಅದನ್ನು ನೋಂದಣಿ ಮಾಡಿ ಎಫ್ ಎಲ್ ಎಂ ಎಸ್/ಬಿ ಎಸ್/282/2023 ಎಂದು ಸಂಖ್ಯೆ ನೀಡಿರುತ್ತಾರೆ. ಸದರಿ ಪ್ರಕರಣವು ನನಗೆ ಎಫ್ ಎಲ್ ಎಂ ಎಸ್ ಮೂಲಕ ಹಂಚಿಕೆಯಾಗಿರುತ್ತದೆ. ಸದರಿ ವಸ್ತುಗಳನ್ನು ಪರೀಕ್ಷೆಗೆ ತೆಗೆದುಕೊಂಡು

ನೋಡಲಾಗಿ ಅವುಗಳ ಮೇಲೆ ಇದ್ದ ಮೊಹರುಗಳು ಮಾದರಿ ಮೊಹರಿನೊಂದಿಗೆ ತಾಳೆಯಾಗಿದ್ದು ಸುಸ್ಥಿತಿಯಲ್ಲಿದ್ದವು. ಸದರಿ ವಸ್ತುಗಳ ವಿವರ ಹೀಗಿರುತ್ತದೆ.

.1. ಒಂದು ಡ್ರ್ಯಾಗರ್

.2. ಒಂದು T Shirt

.3. ಒಂದು T Shirt.

.ಈ ಮೇಲೆ ಹೇಳಿದ ವಸ್ತುಗಳನ್ನು ರಾಸಯನಿಕ ಪರೀಕ್ಷೆಗೆ ಒಳಪಡಿಸಿದಾಗ ವಸ್ತು ಸಂಖ್ಯೆ 1, 2 ಮತ್ತು 3 ರಲ್ಲಿ ರಕ್ತದ ಕಲೆ ಕಂಡು ಬಂದಿರುತ್ತದೆ. ವಸ್ತು ಸಂಖ್ಯೆ 2 ಮತ್ತು 3 ರಲ್ಲಿ ಕಂಡು ಬಂದಿರುವ ರಕ್ತದ ಕಲೆ ಮನುಷ್ಯನ "ಎ" ಗುಂಪಿನ ರಕ್ತದ ಕಲೆಯಾಗಿರುತ್ತದೆ. ವಸ್ತು ಸಂಖ್ಯೆ 1 ರಲ್ಲಿ ಕಂಡು ಬಂದ ರಕ್ತದ ಕಲೆಯು ಸೆರಾಲಾಜಿಕಲ್ ಪರೀಕ್ಷೆಗೆ ಸಾಕಾಗಿರುವುದಿಲ್ಲ. ನನ್ನ ಈ ಪರೀಕ್ಷೆ ಸಂಬಂಧಿಸಿದಂತೆ ಪರೀಕ್ಷೆಯ ಬಳಿಕ ವರದಿಯನ್ನು ತಯಾರಿಸಿ ಡಿಜಿಟಲ್ ಸಹಿಯುಳ್ಳ ವರದಿಯನ್ನು ಸಂಬಂಧಪಟ್ಟ ಪೊಲೀಸ್ ಠಾಣೆಗೆ ನಮ್ಮ ಉಪ ನಿರ್ದೇಶಕರ ಮೂಲಕ ಡಿ ವೈ ಎಸ್ ಪಿ ಕಛೇರಿಗೆ ಕಳುಹಿಸಿಕೊಟ್ಟಿರುತ್ತೇನೆ. ಪರೀಕ್ಷೆಯ ನಂತರ ಎಲ್ಲಾ ಮೂರೂ ವಸ್ತುಗಳನ್ನು ಮರು ಪ್ಯಾಕ್ ಮಾಡಿ ನಮ್ಮ ಕಛೇರಿಯ ಸೀಲ್ ನೊಂದಿಗೆ ಸಂಬಂಧಪಟ್ಟ ಡಿ ವೈ ಎಸ್ ಪಿ ರವರಿಗೆ ಕಳುಹಿಸಿಕೊಟ್ಟಿರುತ್ತೇನೆ. ನಾನು ಪರೀಕ್ಷೆ ಮಾಡಿದ ಆ ಮೂರು ವಸ್ತುಗಳನ್ನು ಗುರುತಿಸಬಲ್ಲೆ. ಸಾಕ್ಷಿ ಮು.ಮಾ.1 ರಿಂದ ಮು.ಮಾ.3 ಅನ್ನು ನೋಡಿ ಗುರುತಿಸಿರುತ್ತಾರೆ. ನಾನು ನೀಡಿದ ವರದಿಯನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ಗುರುತಿಸಿದ ವರದಿಯನ್ನು ನಿಪಿ.25 ಎಂದು ಗುರುತಿಸಲಾಯಿತು.

.

**ಪಾಟೀ ಸವಾಲುಃ *2* ರಿಂದ *5* ನೇ ಆರೋಪಿತರ ಪರ ಶ್ರೀ ಎಸ್ ಪಿ ಎಸ್ ವಕೀಲರಿಂದಃ**

1. ನಾನು ಮು.ಮಾ.1 ರಿಂದ ಮು.ಮಾ.3 ಅನ್ನು ಪರೀಕ್ಷೆಗೆ ಒಳಪಡಿಸುವ ಮೊದಲು ಕೂಲಂಕುಷವಾಗಿ ಪರಿಶೀಲಿಸಿದ್ದೇನೆ. ಮು.ಮಾ.1 ರಲ್ಲಿ ನಾನು ರಕ್ತದ ಕಲೆ ಬಿಟ್ಟು ಬೇರೆ ಗುರುತುಗಳನ್ನು ನೋಡಿಲ್ಲ. ನಾನು ಮು,ಮಾ.1

ಅನ್ನು ಪರೀಕ್ಷೆಗೆ ಒಳಪಡಿಸಿದಾಗ ಅದು ತುಕ್ಕು ಹಿಡಿದ ರೀತಿಯಲ್ಲಿತ್ತು ಎಂದರೆ ಸರಿ. ನಾನು ಮು.ಮಾ.1 ಅನ್ನು ಪರೀಕ್ಷಿದಾಗ ಅದರಲ್ಲಿ ರಕ್ತದ ಕಲೆಗಳು ಇರಲಿಲ್ಲ ಎಂದರೆ ಸರಿಯಲ್ಲ. ಮು.ಮಾ.1 ರ ಯಾವ ಭಾಗದಲ್ಲಿ ರಕ್ತಕಲೆಗಳು ಇತ್ತು ಎಂದು ವರದಿಯಲ್ಲಿ ನಮೂದು ಮಾಡಿಲ್ಲ. ಅದೇ ರೀತಿ ಯಾವ ಪ್ರಮಾಣದಲ್ಲಿ ರಕ್ತದ ಕಲೆ ಇತ್ತು ಎಂದೂ ಕೂಡ ನಮೂದು ಮಾಡಿಲ್ಲ. ಮು.ಮಾ.2 ಮತ್ತು ಮು.ಮಾ.3 ರಲ್ಲಿ ರಕ್ತದ ಕಲೆ ಇರಲಿಲ್ಲ ಎಂದರೆ ಸರಿಯಲ್ಲ.ಮು.ಮಾ.2 ಮತ್ತು ಮು.ಮಾ.3 ರ ಬಣ್ಣ ಮತ್ತು ಅಳತೆಯನ್ನು ವರದಿಯಲ್ಲಿ ನಮೂದು ಮಾಡಿಲ್ಲ ಆದರೆ ನಮ್ಮ observation sheet ನಲ್ಲಿ ನಮೂದು ಮಾಡಿದ್ದೇನೆ. ಅವುಗಳ ಅಳತೆ ಈಗ ನೆನಪು ಇಲ್ಲ. ಮು.ಮಾ.1 ರಿಂದ ಮು.ಮಾ.3 ಅನ್ನು ನಾನು ಕೂಲಂಕುಷವಾಗಿ ಪರಿಶೀಲಿಸಿಲ್ಲ ತನಿಖಾಧಿಕಾರಿಯ ಮಾತಿನಂತೆ ಸುಳ್ಳು ವರದಿ ನೀಡಿದ್ದೇನೆಂದರೆ ಸರಿಯಲ್ಲ. ಮು.ಮಾ.2 ಮತ್ತು ಮು.ಮಾ.3 ರಲ್ಲಿ ರಕ್ತದ ಕಲೆಗಳು ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿಗಳ ವಿರುದ್ಧ ಸುಳ್ಳು ವರದಿ ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ಮರು ವಿಚಾರಣೆಃ ಇಲ್ಲ)

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಒ.

(ಯಾದವ ಕೆ.)

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಮಂಡ್ಯ.